

ಕಣ್ಣಿಗೆ ಕಾಣುವ ಭೌತಿಕ ಕ್ರೌರ್ಯ ಮತ್ತು ಕಣ್ಣಿಗೆ ಕಾಣದ ಕಾನೂನಿನ ಹಿಡಿತಕ್ಕೆ ಸಿಲುಕದ ಮನಸ್ಸಿನಾಳದ ಕ್ರೌರ್ಯಗಳನ್ನು ತಲ್ಲಣ ಹುಟ್ಟಿಸುವ ವಿಶಿಷ್ಟ ಹದದಲ್ಲಿ ಮುಖಾಮುಖಿಗೊಳಿಸುವ ಕಿರುಚಿತ್ರವಿದು.

■ ಗೌರಿ

# ತಣ್ಣನೆ ಕ್ರೌರ್ಯದ ಗುಪ್ತಗಾಮಿನಿ

ಮುಖಾಮುಖಿ ಹೊಡೆದಾಡುವ, ರಕ್ತದ ಕೋಡಿ ಹರಿಸುವ, ನಿಷ್ಕರುಣೆಯಿಂದ ಜೀವ ತೆಗೆಯುವ ಕ್ರೌರ್ಯದ ಮುಖಗಳೆಲ್ಲವೂ ಮೂರ್ತರೂಪದ್ದು. ಅವನ್ನು ನಾವು ಕಣ್ಣಲ್ಲಿ ಕಾಣಬಹುದು; ಗುರ್ತಿಸಬಹುದು. ಹಾಗಾಗಿಯೇ ಅಂತಹುದನ್ನು ಕಾನೂನು, ಶಿಕ್ಷೆಗಳ ಭಯದಿಂದಲಾದರೂ ನಿಯಂತ್ರಿಸಬಹುದು. ಆದರೆ ಮನುಷ್ಯನ ಮನಸ್ಸಿನೊಳಗೇ ಅಂತರ್‌ವಾಹಿನಿಯಾಗಿ ಹರಿಯುತ್ತಿರುತ್ತದಲ್ಲ, ಯಾವ ಕಾನೂನಿನ ಇಕ್ಕಳಕ್ಕೂ ಸಿಕ್ಕದೆ ಒಳಗೊಳಗೇ ಕೊರೆದು ಮನುಷ್ಯತ್ವ ಗೋಪುರವನ್ನೇ ಶಿಥಿಲಗೊಡಿಸಿಬಿಡುತ್ತವಲ್ಲ, ಅಂಥ ಕ್ರೌರ್ಯದ ಗುಪ್ತಗಾಮಿನಿಯನ್ನು ಕಾನೂನು ತಡೆಯಬಹುದೇ? ಭೌತಿಕ ಶಿಕ್ಷೆಗಳು ಅವುಗಳನ್ನು ನಿಯಂತ್ರಿಸಬಹುದೇ? ಅದು ಈ ಕಾನೂನಿನ ಕಟ್ಟಳೆಗಳನ್ನೆಲ್ಲ ನೋಡಿ ಕೇಕೆ ಹಾಕಿ ನಗುತ್ತಿರುತ್ತದೆ. ಕಾನೂನು ತಾನು ತನ್ನಲ್ಲೇ ಬಂಧಿಯಾಗಿ ಕಣ್ಣೆದುರೇ ನೈತಿಕತೆಯ ಅಧಃಪತನ ನಡೆಯುತ್ತಿದ್ದರೂ ಅಸಹಾಯಕವಾಗಿ ನಿಂತು ನೋಡುತ್ತಿರುತ್ತದೆ; ಬೀದಿಯಲ್ಲಿ ಆದ ಅಪಘಾತವನ್ನು ಸುತ್ತೆಲ್ಲ ನೆರೆದ ಜನ ನೋಡುತ್ತ ನಿಲ್ಲುವ ಹಾಗೆ.

ಕಾನೂನು, ಅಪರಾಧಗಳು ಮತ್ತು ಗುಪ್ತಗಾಮಿನಿಯಾಗಿ ಹರಿಯುವ ಕ್ರೌರ್ಯದ ಭೀಕರ ಪರಿಣಾಮಗಳು... ಈ ಮೂರನ್ನೂ ಮೂರು ಅಂಚುಗಳನ್ನಾಗಿಸಿ ಒಂದು ಆಕೃತಿಯನ್ನು ಕಟ್ಟಿಕೊಡುತ್ತದೆ 'ದ ಲವರ್ಸ್' ಕಿರುಚಿತ್ರ. ಆದರೆ ಆ ಆಕೃತಿ ಎಷ್ಟು ಭಯಾನಕವಾಗಿದೆ ಎಂದರೆ ನಮ್ಮೊಳಗೆ ತಲ್ಲಣದ ನಿರಂತರ ಅಲೆಗಳನ್ನು ಎಬ್ಬಿಸಿಬಿಡುತ್ತದೆ. ಗುಂಡಿಟ್ಟು ಕೊಲ್ಲುವ ಕೃತ್ಯ ಹೀನಾಯವೋ ಅಥವಾ ಆ ಕೊಲೆಯನ್ನು ಬಯಸುವ, ಅದಕ್ಕೆ ತಕ್ಕ ವೇದಿಕೆಯನ್ನು ನಿರ್ಮಿಸುವ ಮನಃಸ್ಥಿತಿ ಹೀನಾಯವೋ ಎಂಬ ಮೂಲಭೂತ ಪ್ರಶ್ನೆಯನ್ನು ನಮ್ಮೆದುರು ಇಟ್ಟು ಕಂಗೆಡಿಸುತ್ತದೆ. ಕಾನೂನಿನ ಹಿಡಿತಕ್ಕೆ ಸಿಗದ ಹಾಗೆ ಮನಸ್ಸುಗಳಲ್ಲೇ



**ಹೆಸರು:** ದ ಲವರ್ಸ್
**ನಿರ್ಮಾಣ:** ವಂದನಾ ಮೊರ್ದಾನಿ
**ಛಾಯಾಗ್ರಹಣ:** ವಿಜಯ್ ಚೌಧರಿ
**ಸಂಕಲನ:** ಕುನಾಲ್ ವಾಳ್ವೆ
**ಸಂಗೀತ:** ಮಣ್ಣನ್ ಮುಂಜಾಲ್
**ತಾರಾಗಣ:** ಅನುರಾಗ್ ಮಲ್ಹಾನ್, ಶ್ವೇತಾ ಬಸು ಪ್ರಸಾದ್, ಜರೀನಾ ವಹಾಬ್, ಸಾರಂಗ್ ಪಟವರ್ಧನ್

ವ್ಯಾಪಿಸಿರುವ ಹಿಂಸೆಯ ವಿರಾಟ್ ಸ್ವರೂಪವನ್ನು ದರ್ಶಿಸಿ ಬೆಚ್ಚಿಬೀಳಿಸುತ್ತದೆ.

ಹೆಣ್ಣೊಬ್ಬಳಿಂದ ಮಾತ್ರವೇ ಇದು ಸಾಧ್ಯವೇನೋ ಎಂಬಷ್ಟು ಸೂಕ್ಷ್ಮವಾಗಿ, ಆಳವಾಗಿ ಪ್ರೀತಿ ಸಿಂಗ್ ಈ ಚಿತ್ರವನ್ನು ಕಟೆದಿದ್ದಾರೆ. ಇದು ಎಲ್ಲಿಯೂ ವಾಚ್ಯಗೊಳ್ಳುವುದಿಲ್ಲ. ಘೋಷಣೆಯ ಧ್ವನಿಯಲ್ಲಿ ಮಾತಾಡುವುದಿಲ್ಲ. ಹಾ, ಇಲ್ಲಿನ ನಾಯಕಿ ಇಡೀ ಕಿರುಚಿತ್ರದುದ್ದಕ್ಕೂ ಒಂದೂ ಮಾತಾಡುವುದಿಲ್ಲ! ನಾಯಕಿಯ ಈ ಮೌನವೇ ಹಲವು ಧ್ವನಿಗಳನ್ನು ರಿಂಗಣಿಸುವ ಹಾಗಿದೆ. ಕೊನೆಗೂ ಪುರುಷ ದ್ವೇಷದ ಗೇಮ್‌ಗೆ ದಾಳವಾಗುವ, ಬಲಿಯೂ ಆಗುವ ಹೆಣ್ಣಿನ ಹೀನಾಯ ಸ್ಥಿತಿಯನ್ನು ತುಂಬ ಸೂಕ್ಷ್ಮವಾಗಿ ಅಷ್ಟೇ ದಟ್ಟವಾಗಿ ಧ್ವನಿಸುವ ಹಾಗಿದೆ.

ಪೊಲೀಸರು, ಕಾನೂನಿನ ದುರ್ಬಲತೆ, ಹುಡುಗಿಯ ಮನೆಗೆ ನುಗ್ಗಿ ಗಲಾಟೆ ಮಾಡುವ ಹುಡುಗನ ಮೂಲಕ ಭೌತಿಕ ಕ್ರೌರ್ಯವನ್ನು ಕಟ್ಟಿಕೊಡುತ್ತಾರೆ ನಿರ್ದೇಶಕಿ. ಅದೇ ಸಮಯದಲ್ಲಿ ಹೊರಗಿನ ಜಗತ್ತಿಗೆ ಗೋಚರವೇ ಆಗದ ಹಾಗೆ ಒಳಗೊಳಗೇ ಹರಿಯುತ್ತಿರುವ ಸೇಡಿನ ಬಡಬಾಗ್ನಿಯನ್ನೂ ಅಷ್ಟೇ ಸಟಲ್ ಆಗಿ ನಿರ್ವಹಿಸಿದ್ದಾರೆ. ನಿರ್ದೇಶಕಿಗೆ ದೃಶ್ಯ ಮಾಧ್ಯಮಕ್ಕಿರುವ ಸಾಧ್ಯತೆಗಳ ಬಗ್ಗೆ ಆಳವಾದ ನಂಬಿಕೆ ಮತ್ತು ಅರಿವು ಇಲ್ಲದೇ ಈ ಮಟ್ಟದ ಸಟಲ್ ಆದ ನಿರ್ವಹಣೆ ಸಾಧ್ಯವಿಲ್ಲ.

ತನ್ನ ಮಗನ ಬದುಕಿನಲ್ಲಿ ನಡೆದ ಘಟನೆಯನ್ನು ನಿರ್ಭಾವುಕವಾಗಿ ತಮ್ಮ ಮೇಲೇ ಅನುಕಂಪವುಕ್ಕುವ ಹಾಗೆ ತಂದೆ ಹೇಳುವ ರೀತಿಯಲ್ಲಿಯೇ ಕ್ರೌರ್ಯದ ಆಳವಾದ ಸುಳಿಯಿದೆ. ಆ ಹುಡುಗಿಯ ತಂದೆಗೆ ಅದು ಆಸ್ವಾದಿಸುವ ಒಂದು ಕಥೆಯಷ್ಟೇ. ಆದರೆ ಮದುವೆಯಾಗುವ ಹುಡುಗಿಗೆ? ಈ ಕಿರುಚಿತ್ರದ ಅಂತ್ಯವೂ ಅಷ್ಟೇ ಧ್ವನಿಪೂರ್ಣವಾಗಿದೆ. ತನ್ನನ್ನು ಮದುವೆಯಾಗುತ್ತಿರುವ ಹುಡುಗಿಗೆ ಹುಡುಗ, 'ಈ ಮದುವೆಗೆ ನಿನ್ನ ಸಂಪೂರ್ಣ ಸಮ್ಮತಿ ಇದೆ ಅಲ್ಲವೇ? ಯಾರೂ ನಿನಗೆ ಒತ್ತಾಯ ಮಾಡಿ ಒಪ್ಪಿಸಿಲ್ಲ ತಾನೆ?' ಎಂದು ಕೇಳುತ್ತಾನೆ. ಹುಡುಗಿ ಗಟ್ಟಿಯಾಗಿ ಉತ್ತರಿಸುವುದಿಲ್ಲ. ಬದಲಿಗೆ ಅವಳ ಕಣ್ಣುಗಳು ಹನಿಗೂಡುತ್ತವೆ. ಆ ಕಣ್ಣೀರಿನ ಮೂಲ ಯಾವುದು? ಅವಳಿಗೆ ತನ್ನ ಬದುಕಿನ ನಾಳೆಯ ನರಕ ದರ್ಶನವಾಯ್ತೆ? ಅಥವಾ ಗುಂಡಿಗೆ ಬಲಿಯಾದ ಅವನ ಮೊದಲ ಹೆಂಡತಿಯ ದಾರುಣ ಸ್ಥಿತಿಯಲ್ಲಿ ತನ್ನನ್ನೇ ಕಂಡಳೆ? ಪುರುಷಲೋಕದ ಕ್ರೌರ್ಯಕ್ಕೆ ಕಂಗೆಟ್ಟಳೇ?

ಎಷ್ಟೆಲ್ಲ ಪ್ರಶ್ನೆಗಳನ್ನು ಎಬ್ಬಿಸಿ, ಉತ್ತರ ನೀವೇ ಹುಡುಕಿಕೊಳ್ಳಿ ಎನ್ನುವ ಹಾಗೆ ಈ ಚಿತ್ರ ಮುಕ್ತಾಯಗೊಳ್ಳುತ್ತದೆ. ಉತ್ತರ ನಮ್ಮಲ್ಲೇ ಇರುವುದು ನಿಜ. ಆದರೆ ಅದನ್ನು ಎದುರಿಸುವ ಸ್ಥೈರ್ಯ ನಮ್ಮಲ್ಲಿದೆಯೇ?

ಈ ಕಿರುಚಿತ್ರ ವೀಕ್ಷಣೆಗೆ shorturl.at/BGPT8 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.